# ರೋಗಗ್ರಸ್ಥ ಗರ್ಭಕೋಶ ತೆಗೆಯಲು ಸುಲಲಿತ ಹಾಗೂ ಸುರಕ್ಷಿತ ವಿಧಾನ ಲ್ಯಾಪ್ರೊಸ್ಕೋಪಿಕ್ ಹಿಸ್ಟರೆಕ್ಟಮಿ

ಪ್ರತಿಯೊಬ್ಬ ಮಹಿಳೆಗೂ ತಾಯಿಯ ಗೌರವ ನೀಡುವುದು ಆಕೆಯ ಗರ್ಭಕೋಶ. ಯಾವುದೋ ಒಂದು ಹಂತದಲ್ಲಿ ಅಂತದ್ದೊಂದು ಪ್ರಮುಖ ಅಂಗವನ್ನೇ ತೆಗೆದುಹಾಕಬೇಕೆಂದಾಗ ಆಕೆಯ ಮನಸ್ಸಿಗಾಗುವ ನೋವು ಅದು ಮತ್ತೊಬ್ಬ ಮಹಿಳೆಗೆ ಮಾತ್ರ ಅರ್ಥವಾದೀತು. ಇಂಥ ಸಂದರ್ಭದಲ್ಲಿ ಗರ್ಭಕೋಶ ತೆಗೆಯುವ ಕ್ರಿಯೆಯೂ ಆಕೆಯನ್ನು ದೈಹಿಕವಾಗಿ ಕುಗ್ಗಿಸುತ್ತದೆ.

ಇದಕ್ಕೊಂದು ಪರಿಹಾರ ಎನ್ನುವಂತೆ ಬೆಂಗಳೂರಿನ ಕೋರಮಂಗಲದಲ್ಲಿರುವ ಬೀಮ್ಸ್ ಆಸ್ಪತ್ರೆಯ ಡಾ. ಶಾಂತಲಾ ತುಪ್ಪಣ್ಣ ಅವರ ನೇತೃತ್ವದ ತಂಡವು ಉದರದರ್ಶಕ ಬಳಸಿ ನೋವಿಲ್ಲದೆ, ಗಾಯವಿಲ್ಲದೆ, ಹೆಚ್ಚು ರಕ್ತಸ್ರಾವವಿಲ್ಲದೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವಲ್ಲಿ ಈಗಾಗಲೇ ಸಾಕಷ್ಟು ಹೆಸರುವಾಸಿಯಾಗಿದ್ದಾರೆ. ಶಸ್ತ್ರಚಿಕಿತ್ಸೆಯ ನಂತರ ಆಸ್ಪತ್ರೆಯಲ್ಲಿ ಹೆಚ್ಚು ದಿನ ಕಳೆಯದೆ ಹಾಗೂ ಬಹುಬೇಗ ತಮ್ಮ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಈ ನೂತನ ಪದ್ಧತಿಯಲ್ಲಿ ಬಹಳಷ್ಟು ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ ಹಲವರ ಬಾಳು ಬೆಳಗಿದ್ದಾರೆ.

ಮಹಿಳೆಯರ ದೇಹರಚನೆಯಲ್ಲಿ ಗರ್ಭಕೋಶ ಒಂದು ಪ್ರಮುಖ ಅಂಗ. ಗರ್ಭಕೋಶವನ್ನು ತೆಗೆದುಹಾಕುವ ಶಸ್ತ್ರಚಿಕಿತ್ಸೆಗೆ ವೈದ್ಯಕೀಯ ಪರಿಭಾಷೆಯಲ್ಲಿ ಹಿಸ್ಟರೆಕ್ಟಮಿ ಎನ್ನುವರು. ಮಹಿಳೆಯರಲ್ಲಿ ಸಾಮಾನ್ಯವಾಗಿ ನಡೆಸಲಾಗುವ ಶಸ್ತ್ರಚಿಕಿತ್ಸೆ ಇದಾಗಿದೆ. ಭಾರತದಲ್ಲಿ ಸರಿಸುಮಾರು ವರ್ಷಕ್ಕೆ 2,310,263 (ಶೇ. 4–6%) ಶಸ್ತ್ರಚಿಕಿತ್ಸೆಗಳನ್ನು ಕೈಗೊಳ್ಳಲಾಗುತ್ತಿದೆ. ಈ ಮೊದಲು ರೋಗ ಪೀಡಿತ ಗರ್ಭಕೋಶವನ್ನು ಯೋನಿ ನಾಳದ ಮೂಲಕ ಇಲ್ಲವೇ ಸಿಸೇರಿಯನ್ ಮಾಡುವ ರೀತಿಯಲ್ಲಿ ಉದರವನ್ನು ಕತ್ತರಿಸಲಾಗುತ್ತದೆ. ಆದರೆ ಈಗ ವೈದ್ಯ ವಿಜ್ಞಾನದಲ್ಲಿನ ಹೊಸ ಅನ್ವೇಷಣೆಗಳಿಂದ ದೊಡ್ಡ ಗಾತ್ರದ ಗರ್ಭಕೋಶವನ್ನೂ, ಗರ್ಭಕೋಶ ಅಥವಾ ಗರ್ಭಕೋಶ ಕಂಠದ ಕ್ಯಾನ್ಸರ್ ಹಾಗೂ ಆಡಾಂಶಯದ ಗಡ್ಡೆಯನ್ನು ಲ್ಯಾಪ್ರೊಸ್ಕೋಪಿ ಮೂಲಕ ತೆಗೆಯಹುದು.

ಹಿಸ್ಟರೆಕ್ಟಮಿಯನ್ನು ಅತಿ ಋತುಸ್ರಾವಕ್ಕೆ ಎಡೆಮಾಡಿಕೊಡುವ ಗರ್ಭಕೋಶದಲ್ಲಿನ ನಾರಿನಂತಹ ಗಡ್ಡೆ ತೆಗೆಯಲು, ಹಾಗೂ ಇತರೆ ಸಾಮಾನ್ಯ ಕಾರಣಗಳೆಂದರೆ ಅತಿಯಾದ ಗರ್ಭಕೋಶದ ರಕ್ತಸ್ರಾವ, ಗರ್ಭಕೋಶದ ಜಾರುವಿಕೆ, ಗರ್ಭಕೋಶ, ಗರ್ಭಕೋಶ ಕಂಠದ ಕ್ಯಾನ್ಸರ್ ಹಾಗೂ ಅಂಡಾಶಯದ ಗೆಡ್ಡೆಯ ಚಿಕಿತ್ಸೆ ಮಾಡಲಾಗುತ್ತದೆ.

ಒಂದು ವೇಳೆ ಅತಿಯಾದ ಗರ್ಭಕೋಶದ ರಕ್ತಸ್ರಾವವಿದ್ದರೆ, ಕ್ಯಾನ್ಸರ್‌ನ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ರೋಗಿಯು ಒಳ ಅಂಗಾಂಗ ಪರೀಕ್ಷೆಗೆ ಒಳಪಡಬೇಕಾಗುತ್ತದೆ. ಪರೀಕ್ಷೆಯನ್ನು ಇನ್ನೂ ನಿಖರವಾಗಿ ದೃಢಪಡಿಸಿಕೊಳ್ಳಲು ಉದರದ ಅಲ್ಟ್ರಾಸೌಂಡ್ ಪರೀಕ್ಷೆ ನಡೆಸಲಾಗುತ್ತದೆ. ಔಷಧಿಗಳಿಂದ ರೋಗ ಲಕ್ಷಣಗಳು ಉಪಶಮನವಾಗದ್ದಿಗ ಮಾತ್ರ ಶಸ್ತ್ರಚಿಕಿತ್ಸೆಗೆ ಒಳಪಡಿಲಾಗುತ್ತದೆ.






## ಹಿಸ್ಟರೆಕ್ಟಮಿಯ ವಿಧಗಳು ಯಾವುವು?

### ಉದರದ ಮೂಲಕ ಹಿಸ್ಟರೆಕ್ಟಮಿ

ಸಿಸೇರಿಯನ್ ಶಸ್ತ್ರಚಿಕಿತ್ಸೆಯಂತೆ ಕಿಬ್ಬೊಟ್ಟೆಯ ಭಾಗವನ್ನು ಅಡ್ಡವಾಗಿ ಇಲ್ಲವೇ ಉದ್ದವಾಗಿ ಅಗತ್ಯಕ್ಕೆ ತಕ್ಕಂತೆ ಕತ್ತರಿಸಿ ಗರ್ಭಕೋಶದ ಶಸ್ತ್ರಚಿಕಿತ್ಸೆ ನಡೆಸುವ ಪ್ರಕ್ರಿಯೆ ಇದಾಗಿದೆ. ಈ ಬಗೆಯ ಶಸ್ತ್ರಚಿಕಿತ್ಸೆಯಲ್ಲಿ ಗಾಯ ಪೂರ್ಣವಾಗಿ ಮಾಯಲು 4 ರಿಂದ 6 ವಾರಗಳು ಬೇಕಾಗುತ್ತದೆ.

### ಯೋನಿನಾಳದ ಮೂಲಕ ಹಿಸ್ಟರೆಕ್ಟಮಿ

ಈ ಪ್ರಕ್ರಿಯೆಯಲ್ಲಿ ಯೋನಿನಾಳದ ಮುಖಾಂತರ ಗರ್ಭಕೋಶವನ್ನು ತೆಗೆದುಹಾಕಲಾಗುತ್ತದೆ. ಯಾರ ಗರ್ಭಕೋಶವು ಚಿಕ್ಕದಾಗಿರುತ್ತದೋ ಹಾಗೂ ವಿಸ್ತೃತ ಸರ್ಜಿಕಲ್ ವಿಧಾನಗಳ ಮೂಲಕ ಹೊಟ್ಟೆಯ ತಪಾಸಣೆಯ ಅಗತ್ಯವಿರುವುದಿಲ್ಲವೋ ಅಂತಹ ರೋಗಿಗಳಿಗೆ ಇದು ಹೆಚ್ಚು ಸೂಕ್ತ.

### ಲ್ಯಾಪ್ರೊಸ್ಕೋಪಿಕ್ ಹಿಸ್ಟರೆಕ್ಟಮಿ

ಉದರದರ್ಶಕ ಶಸ್ತ್ರಕ್ರಿಯೆಯಲ್ಲಿ ಕಡಿಮೆ ಪ್ರವೇಶದಲ್ಲಿ ಶಸ್ತ್ರಚಿಕಿತ್ಸೆ ನಡೆಸುವುದಲ್ಲದೇ ಹೆಚ್ಚು ಗಾಯವಾಗಲೀ, ಅತಿಯಾದ ರಕ್ತ ಸೋರಿಕೆಯಾಗಲೀ ಹಾಗೂ ಗಾಯದ ಕಲೆಯಾಗಲೀ ಇರದು. ಬಹಳ ಮುಖ್ಯವಾಗಿ ಮಹಿಳೆಯರ ಗರ್ಭಕೋಶ ಶಸ್ತ್ರಚಿಕಿತ್ಸೆ ನಡೆಸುವಾಗ ಒಂದು ರಂಧ್ರವನ್ನು ಹುಕ್ಕಳು ಬಳಿ ಮಾಡುವುದರಿಂದ ಕಲೆ ಇರದಂತೆ ಎಚ್ಚರವಹಿಸಲಾಗುತ್ತದೆ.

ಉದರದರ್ಶಕದ ಪ್ರಮುಖ ಲಾಭವೆಂದರೆ ಅಂಗಾಂಗಗಳಿಗೆ ಹಾಗೂ ಸ್ನಾಯುಗಳಿಗೆ ಹೆಚ್ಚಿನ ಹಾನಿಯಾಗುವುದಿಲ್ಲ. ಇದರಿಂದ ಈ ಶಸ್ತ್ರಚಿಕಿತ್ಸೆಗೆ ಒಳಗಾಗುವ ರೋಗಿಯು ಸಂಪ್ರದಾಯಿಕ ಚಿಕಿತ್ಸಾ ವಿಧಾನಗಳಿಗೆ ಹೋಲಿಸಿದಲ್ಲಿ ಬಹುಬೇಗ ಗುಣಮುಖರಾಗಿ ಮನೆ ಇಲ್ಲವೇ ಕಚೇರಿ ಕೆಲಸಗಳನ್ನು ನಿರ್ವಹಿಸಬಹುದು ಹಾಗೂ ಸೋಂಕು ಹಾಗೂ ನೋವು ನಿವಾರಕ ಗುಳಿಗೆ ಸೇವನೆ ಇಲ್ಲವೇ ಇಲ್ಲ ಅಥವಾ ತೀರಾ ಕಡಿಮೆ.

**ಡಾ. ಶಾಂತಲಾ ತುಪ್ಪಣ್ಣ**
ಸ್ತ್ರೀರೋಗ ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಕಿ
ದೂ: 93429 03045 / 080–39417700

ಬೀಮ್ಸ್ ಆಸ್ಪತ್ರೆ
beams™ hospital
laparoscopic surgery centre

# 640, 12ನೇ ಮುಖ್ಯ ರಸ್ತೆ, 80ಅಡಿ ರಸ್ತೆ, 4ನೇ ಹಂತ,
ಕೋರಮಂಗಲ, ಬೆಂಗಳೂರು–560 034
www.beamshospitals.com,
mail us :- customercare@beamshospitals.com